ಹುಲಸೂರು ಮತ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ಅಂತರರಾಜ್ಯ ಸಂಪರ್ಕಕಲ್ಪಿಸುವ ರಸ್ತೆಗಳ ದುರಸ್ತಿ

921 (1528) - ಶ್ರೀ ರಾಜೇಂದ್ರ ವರ್ಮ (ಹುಲ್‌ಸೂರ್): ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ. ಹುಲಸೂರು ಮತಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ಯಾವ ಯಾವ ರಸ್ತೆಗಳು ಅಂತರರಾಜ್ಯಕ್ಕೆ ಸಂಪರ್ಕ ಕಲ್ಪಿಸುತ್ತವೆ, ಪೂರ್ಣ ವಿವರಗಳನ್ನು ಒದಗಿಸುವುದು.

ಆ. ಈ ರಸ್ತೆಗಳ ಪೈಕಿ ಬಾಲ್ಕಿ-ನೀಲಂಗ ರಸ್ತೆಯು ಬಹಳ ಹದಗೆಟ್ಟಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ, ಹಾಗಿದ್ದಲ್ಲಿ ಈ ರಸ್ತೆಯನ್ನು ದುರಸ್ತಿ ಮಾಡಲು ಸರ್ಕಾರ ಯಾವ ಕ್ರಮವನ್ನು ಕೈಗೊಂಡಿದೆ.

ಇ. ಕಳೆದ 3 ವರ್ಷಗಳಲ್ಲಿ ಸದರಿ ಮತಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ಅಂತರರಾಜ್ಯ ರಸ್ತೆಗಳ ಸುಧಾರಣೆ ಹಾಗೂ ದುರಸ್ತಿಗಾಗಿ ಪ್ರತಿ ವರ್ಷ ಖರ್ಚು ಮಾಡಲಾದ ಹಣವೆಷ್ಟು.

ಈ. ಈ ಆಯವ್ಯಯದಲ್ಲಿ ಈ ರಸ್ತೆಗಳ ಅಭಿವೃದ್ಧಿ ದುರಸ್ತಿಗಾಗಿ ಎಷ್ಟು ಹಣವನ್ನು ಮಂಜೂರು ಮಾಡಲಾಗಿದೆ?

ಶ್ರೀ ಧರ್ಮಸಿಂಗ್ (ಲೋಕೋಪಯೋಗಿ ಸಚಿವರು) :

ಅ. ಬೀದರ್ ಜಿಲ್ಲೆಯ ಹುಲಸೂರು ಮತಕ್ಷೇತ್ರದ ವ್ಯಾಪ್ತಿಯಲ್ಲಿ ಅಂತರ ರಾಜ್ಯ ಸಂಪರ್ಕ ಕಲ್ಪಿಸುವ ರಸ್ತೆಗಳ ವಿವರ ಈ ಕೆಳಕಂಡಂತೆ ಇರುತ್ತದೆ.

1. ರಾಜ್ಯ ಗಡಿಯಿಂದ ಹುಲಸೂರು-ಬಸವಕಲ್ಯಾಣ-ಮುಡಬಿ-ಮಹಾಗಾಂವ ರಾಜ್ಯ ಹೆದ್ದಾರಿ ಕಿಮೀ 0.00 ರಿಂದ 20.00

2. ಬಾಲ್ಕಿ - ನೀಲಂಗಾ ಜಿಲ್ಲಾ ಮುಖ್ಯ ರಸ್ತೆ ಕಿಮೀ 18.00 ರಿಂದ 31.20

ಆ. ಗಮನದಲ್ಲಿ ಬಂದಿರುತ್ತದೆ. ಈ ದುರಸ್ತಿ ಕಾಮಗಾರಿಗಳನ್ನು ಈ ಕೆಳಕಂಡ ಯೋಜನೆಗಳಲ್ಲಿ ಕೈಗೆತ್ತಿಕೊಳ್ಳಲಾಗಿದೆ.

ಕ್ರ ಸಂ.	ಕಾರ್ಯಕ್ರಮದ ಹೆಸರು	ತೆಗೆದುಕೊಳ್ಳಲಾದ ಉದ್ದ	ಪೂರ್ಣಗೊಳಿಸಿದ ಉದ್ದ	ಅಂದಾಜು ಮೊತ್ತ	ಒಟ್ಟಾರೆ ಖರ್ಚು
1	ರೂ. 75.00 ಕೋಟಿ ಕಾರ್ಯಕ್ರಮ	5.20 ಕಿಮೀ (26.00 ರಿಂದ 31.20 ಕಿಮೀ	4.20 ಕಿಮೀ	25.00 ಲಕ್ಷ	28.20 ಲಕ್ಷ
2	ಕೇಂದ್ರ ರಸ್ತೆ ನಿಧಿ ಕಾರ್ಯಕ್ರಮ	5.80 ಕಿಮೀ (16.70 ರಿಂದ 22.50 ಕಿಮೀ)	5.00 ಕಿಮೀ	65.00 ಲಕ್ಷ	45.00 ಲಕ್ಷ
3	ವಿಧಾನಸಭಾ ಕ್ಷೇತ್ರ ವಿಶೇಷ ಅಭಿವೃದ್ಧಿ ಕಾರ್ಯಕ್ರಮ	8.00 ಕಿಮೀ (18.00 ರಿಂದ 26.00)	-	30.00 ಲಕ್ಷ	12.47 ಲಕ್ಷ
	ಒಟ್ಟು			120	85.67

ಇ. ಹುಲಸೂರು ಮತಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ಅಂತರ ರಾಜ್ಯ ರಸ್ತೆಗಳ ಸುಧಾರಣೆ ಹಾಗೂ ದುರಸ್ತಿಗಾಗಿ ಕಳೆದ ಮೂರು ವರ್ಷಗಳಲ್ಲಿ "ಆ" ದಲ್ಲಿ ತೋರಿಸಿದ ವೆಚ್ಚವಲ್ಲದೆ ಇನ್ನೂ ಕೆಳಗಿನಂತೆ ವೆಚ್ಚ ಮಾಡಲಾಗಿದೆ.

1999-2000	ರೂ. 5.58 ಲಕ್ಷಗಳು
2000-2001	ರೂ. 9.36 ಲಕ್ಷಗಳು
2001-2002	ರೂ. 2.27 ಲಕ್ಷಗಳು
ಒಟ್ಟು	ರೂ. 17.21 ಲಕ್ಷಗಳು

ಈ. 2002-03 ನೇ ಸಾಲಿನ ಆಯವ್ಯಯದಲ್ಲಿ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿನ ವಿಶೇಷ ಅಭಿವೃದ್ಧಿ ಲೆಕ್ಕ ಶೀರ್ಷಿಕೆಯಲ್ಲಿ ಬಾಲ್ಕಿ-ನೀಲಂಗ ರಸ್ತೆ ಅಭಿವೃದ್ಧಿಗಾಗಿ ರೂ.1.10 ಲಕ್ಷಗಳ ಹಣ ಮಂಜೂರು ಮಾಡಲಾಗಿದೆ.

ಹುಲಸೂರು ಮತಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ಸಾಯಿಗಾಂವ್ ಸೇತುವೆ ನಿರ್ಮಾಣ

922 (1529) - ಶ್ರೀ ರಾಜೇಂದ್ರವರ್ಮ (ಹುಲಸೂರ್): ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ. ಹುಲಸೂರು ಮತಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ಸಾಯಿಗಾಂವ್ ಬಳಿ ಅಂತರರಾಜ್ಯಕ್ಕೆ ಸಂಪರ್ಕ ಕಲ್ಪಿಸಲು ಅನುಕೂಲವಾಗುವಂತೆ ಸೇತುವೆಯನ್ನು ನಿರ್ಮಿಸುವ ಪ್ರಸ್ತಾವನೆ ಸರ್ಕಾರದ ಮುಂದಿರುವುದು ನಿಜವಲ್ಲವೇ.

ಆ. ಹಾಗಿದ್ದಲ್ಲಿ, ಈ ವಿಷಯದ ಬಗ್ಗೆ ಇಲ್ಲಿಯವರೆಗೆ ಕೈಗೊಂಡಿರುವ ಕ್ರಮಗಳೇನು.

ಇ. ಇದಕ್ಕಾಗಿ ಇಲ್ಲಿಯವರೆಗೆ ಖರ್ಚು ಮಾಡಿರುವ ಹಣವೆಷ್ಟು? ಪ್ರಸಕ್ತ ವರ್ಷದ ಆಯವ್ಯಯದಲ್ಲಿ ಈ ಕಾಮಗಾರಿಗಾಗಿ ಎಷ್ಟು ಹಣವನ್ನು ಮೀಸಲಾಗಿರಿಸಿದೆ.

ಈ. ಅಂತರರಾಜ್ಯಕ್ಕೆ ಸಂಪರ್ಕ ಕಲ್ಪಿಸುವ ಈ ಸೇತುವೆಯ ಕಾಮಗಾರಿಯನ್ನು ಪ್ರಸಕ್ತ ಸಾಲಿನಲ್ಲಿ ತೆಗೆದುಕೊಳ್ಳಲಾಗುವುದೇ, ಇಲ್ಲದಿದ್ದಲ್ಲಿ, ಕಾರಣಗಳೇನು?

ಶ್ರೀ ಧರ್ಮಸಿಂಗ್ (ಲೋಕೋಪಯೋಗಿ ಸಚಿವರು) :

ಅ. ಹೌದು. ನಬಾರ್ಡ್ ಯೋಜನೆಯಡಿ ಪ್ರಸ್ತಾವಿಸಲಾಗಿದೆ.

ಆ. ಈ ಕಾಮಗಾರಿಯು ಸಚಿವ ಸಂಪುಟ ಉಪ ಸಮಿತಿಯಿಂದ ಒಪ್ಪಿತವಾಗಿರುವುದಿಲ್ಲ. ಈ ಕಾಮಗಾರಿಯು ಜಿಲ್ಲಾ ಪಂಚಾಯತ್ ವ್ಯಾಪ್ತಿಗೆ ಬರುವುದರಿಂದ ಲೋಕೋಪಯೋಗಿ ಇಲಾಖೆಯವತಿಯಿಂದ ಬೇರೆ ಯಾವುದೇ ಕಾರ್ಯಕ್ರಮದಲ್ಲಿ ಕೈಗೊಳ್ಳಲಾಗುವುದಿಲ್ಲ.

ಇ. ಉದ್ಭವಿಸುವುದಿಲ್ಲ.

ಈ. ಈ ಬಗ್ಗೆ ಪರಿಶೀಲಿಸಲಾಗುವುದು.

ಉಡುಪಿ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿನ ರಾಜ್ಯ ಹೆದ್ದಾರಿ ಅಗಲಗೊಳಿಸುವುದು

923 (1352) - ಶ್ರೀ ಸಭಾಪತಿ ಯು.ಆರ್. (ಉಡುಪಿ): ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?